

> ಮಕ್ಕಳನ್ನು ವಯಸ್ಕರೊಡನೆ ಐ.ಸಿ.ಯು.ಗಳಲ್ಲಿ ಇರಿಸುವುದು ಸಮರ್ಪಕವಲ್ಲ. ಮಕ್ಕಳನ್ನು ಐ.ಸಿ.ಯು.ಗಳ ತನಕ ತಳ್ಳದಂತೆ ಮುನ್ನೆಚ್ಚರಿಕೆ ವಹಿಸುವುದೇ ಈಗಿನ ತುರ್ತು
>
> **-ಸುಚಿತ್ರಾ ರಾವ್,** ಇಂಡಿಯಾ ಲಿಟೆರಸಿ ಪ್ರಾಜೆಕ್ಟ್



> ಕೋವಿಡ್ ಪರಿಸ್ಥಿತಿ ಹೀಗೇ ಮುಂದುವರೆದರೆ ಗ್ರಾಮೀಣ ಪ್ರದೇಶಗಳಲ್ಲೆಡೆ ವ್ಯಾಪಿಸುತ್ತದೆ. ಮಕ್ಕಳನ್ನು ಬಾಧಿಸುವ ಮೊದಲು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆಗಳು ಶೀಘ್ರವಾಗಿ ಸಂಘಟಿತವಾಗಿ, ಮಾಹಿತಿ ಎಲ್ಲರಿಗೂ ದೊರಕುವಂತಾಗಬೇಕು
>
> **-ಡಾ. ಮಹೇಂದ್ರ ರಾಜನ್,** ವಿಪತ್ತು ನಿರ್ವಹಣೆ ಪರಿಣತ

ಸುಲಭವಾಗಿ ‘ಅನಾಥ ಎಂದು ಹೇಳಲು ಬಿಡುವುದಿಲ್ಲ. ಹಾಗೆಯೇ ಅಂತಹ ಮಕ್ಕಳನ್ನು ಯಾವುದೇ ಪೂರ್ವಾಪರಗಳನ್ನು ವಿಚಾರಿಸದೆ ಮಕ್ಕಳ ನಿಲಯಗಳಲ್ಲಿ ಇರಿಸಲು ಅಥವಾ ದತ್ತು ಕೊಟ್ಟುಬಿಡಲು ಒಪ್ಪುವುದಿಲ್ಲ. ಆ ಮಕ್ಕಳಿಗೆ ಕೇವಲ ಒಬ್ಬರೇ ಪೋಷಕರಿದ್ದರೂ ಅವರಿಗೆ ಅವಶ್ಯವಾದ ಆರ್ಥಿಕ ಮತ್ತು ಸಾಮಾಜಿಕ ನೆರವು ಕೊಟ್ಟು ಅಂತಹವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಇರುವ ದಾರಿಗಳನ್ನು ಹುಡುಕಲು ಕಾಯಿದೆ ನಿರ್ದೇಶಿಸುತ್ತದೆ. ಹಾಗೆಯೇ ಇಬ್ಬರೂ ಪೋಷಕರು ಇಲ್ಲವಾದರೆ, ಆ ಮಕ್ಕಳ ಸಂಬಂಧಿಗಳು ಯಾರಾದರೂ ಮಕ್ಕಳನ್ನು ನೋಡಿಕೊಳ್ಳಲು ಮುಂದೆ ಬಂದಲ್ಲಿ ಅವರಿಗೆ ಮೊದಲ ಆದ್ಯತೆಯನ್ನು ನೀಡಬೇಕು, ಮತ್ತು ಅಂತಹ ಸಾಧ್ಯತೆಗಳು ಇಲ್ಲವಾದಲ್ಲಿ ಮಾತ್ರ ತಾತ್ಕಾಲಿಕವಾಗಿ ಮಕ್ಕಳ ನಿಲಯಗಳಲ್ಲಿ ಇರಿಸಬೇಕು, ನಂತರವಷ್ಟೆ ಆ ಮಗುವನ್ನು ಸೂಕ್ತವಾದ ಕುಟುಂಬಕ್ಕೆ ದತ್ತು ನೀಡುವ ಸಾಧ್ಯತೆಯನ್ನು ಪರಿಶೀಲಿಸಬೇಕೆಂದು ಕಾಯಿದೆ ನಿರ್ದೇಶಿಸಿದೆ.

## ಪಾಲನಾನಿಲಯಗಳು ಸುರಕ್ಷಿತವೇ?

ಅನಾಥ ಮಕ್ಕಳನ್ನು ಇರಿಸುವ ನಿಲಯಗಳು ಅವರಿಗೆ ಸುರಕ್ಷಿತ ಮತ್ತು ಆರೋಗ್ಯಪೂರ್ಣ ಬೆಳವಣಿಗೆಗೆ ಪೂರಕವೇ?

ವಿಶ್ವಸಂಸ್ಥೆ, ಮಕ್ಕಳನ್ನು ಸಾಧ್ಯವಾದಷ್ಟೂ ನಿಲಯಗಳಲ್ಲಿ ಕೂಡಿಡುವುದು ಬೇಡ ಎಂದೇ ಸಲಹೆ ನೀಡಿದೆ. ಭಾರತ 2013ರಲ್ಲಿ ಹೊರಡಿಸಿರುವ ‘ರಾಷ್ಟ್ರೀಯ ಮಕ್ಕಳ ನೀತಿ’ ಕೂಡಾ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ‘ಮಕ್ಕಳ ನ್ಯಾಯ ಕಾಯಿದೆ 2015’ರ ಮೂಲಕ ಈಗಿನ ಒತ್ತಾಸೆ ಏನೆಂದರೆ, ಕುಟುಂಬದ ಬಂಧುಗಳೊಡನೆ ಅಥವಾ ತಾತ್ಕಾಲಿಕವಾಗಿ ಫಾಸ್ಟರ್ ಕೇರ್‌ನಲ್ಲಿ ನೋಡಿಕೊಳ್ಳುವ ಸ್ವಯಂಸೇವಾ ಕುಟುಂಬಗಳು, ಅಥವಾ ದತ್ತು ಮತ್ತು ಅಂತಹ ವ್ಯವಸ್ಥೆಗಳಿಗೆ (ಉದಾ. ಗ್ರೂಪ್ ಫಾಸ್ಟರ್ ಹೋಂಗಳಿಗೆ) ಮಕ್ಕಳನ್ನು ವಹಿಸುವುದೇ ಆಗಿದೆ. ಹಿಂದಿನ ಹಲವು ದಶಕಗಳಲ್ಲಿ ಉಂಟಾದ ವಿವಿಧ ರೀತಿಯ ದುರಂತಗಳಿಂದ (ಪ್ರವಾಹ, ಭೂಕಂಪ, ರೋಗರುಜಿನಗಳು, ಗಲಭೆ, ಯುದ್ಧ, ಕಾಡ್ಗಿಚ್ಚು ಇತ್ಯಾದಿ) ಅನಾಥರಾದ ಮಕ್ಕಳನ್ನು ನೋಡಿಕೊಳ್ಳಲು ಕಂಡುಕೊಂಡಿದ್ದ ಸುಲಭವಾದ ಪರಿಹಾರ ಅನಾಥಾಲಯಗಳು. ಕಳೆದ ಶತಮಾನದಲ್ಲಿ ಒಂದೊಂದು ದುರಂತಗಳಾದಾಗಲೂ ಜಗತ್ತಿನೆಲ್ಲೆಡೆ ಹೆಚ್ಚು ಹೆಚ್ಚು ಅನಾಥಾಲಯಗಳು, ಮಕ್ಕಳ ನಿಲಯಗಳನ್ನು ಧಾರ್ಮಿಕ ಮತ್ತು ಸಾಮಾಜಿಕ ಸಂಘಟನೆಗಳು ಆರಂಭಿಸುತ್ತಾ ಹೋದದ್ದು ವಾಸ್ತವ.

ಇದರಲ್ಲಿ ಸರ್ಕಾರಗಳ ನಿಷ್ಕ್ರಿಯತೆಯ ಪಾಲೂ ಇದೆ. ಇಂತಹ ನಿಲಯಗಳಿಂದ ಎಲ್ಲೋ ಒಂದಷ್ಟು ಧನಾತ್ಮಕ ಪರಿಣಾಮಗಳು ಕಂಡುಬಂದರೂ, ಸಾಕಷ್ಟು ಸಂಖ್ಯೆಯ ಮಕ್ಕಳಲ್ಲಿ ಸಮರ್ಪಕವಾದ ದೈಹಿಕ, ಮಾನಸಿಕ ವಿಕಾಸವಾಗದಿರುವುದು, ಸದಾ ಕಾಲ ಇನ್ನೊಬ್ಬರ ಮೇಲೆ ಅವಲಂಬಿತರಾಗಿರುವುದು, ಭಯದಲ್ಲೇ ಬೆಳೆಯುವುದು, ನಿರ್ಧಾರ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದು, ಜೀವನ ಕೌಶಲ್ಯಗಳ ಪರಿಚಯವಿಲ್ಲದಿರುವುದು, ಶೈಕ್ಷಣಿಕವಾಗಿಯೂ ಅಷ್ಟೇನೂ ಮುಂದುವರೆಯದಿರುವುದು, ಮುಂದೆ ತಮ್ಮದೇ ನೆಲೆ ಕಂಡುಕೊಳ್ಳಲು ಚಡಪಡಿಸುವುದು, ಕಷ್ಟಪಡುವುದು, ಬಹಳ ಸುಲಭವಾಗಿ ದೌರ್ಜನ್ಯ, ಹಿಂಸೆಗೆ ಬಲಿಯಾಗುವುದು, ಇಲ್ಲವೇ ಅಪರಾಧಿ ಚಟುವಟಿಕೆಗಳಲ್ಲಿ ತೊಡಗುವುದು, ಮಾದಕ ವಸ್ತುಗಳಿಗೆ ಬಲಿಯಾಗುವುದು, ಆತ್ಮಹತ್ಯೆ ಮಾಡಿಕೊಳ್ಳುವುದು, ಯೋಗ್ಯರಲ್ಲದ ವ್ಯಕ್ತಿಗಳನ್ನು ಆಶ್ರಯಿಸುವುದು, ಮೋಸ ಹೋಗುವುದು, ಬಹಳ ಬೇಗ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗುವುದು, ಮದುವೆಯಾಗುವುದು, ಬೇಕಿದ್ದೋ ಬೇಡವಾಗಿಯೋ ಬೇಗ ಗರ್ಭಧರಿಸುವುದು, ಯಾವುದೇ ಉದ್ಯೋಗವನ್ನು ಗಂಭೀರವಾಗಿ ತೆಗೆದುಕೊಳ್ಳದಿರುವುದು ಇವೇ ಮೊದಲಾದ ಋಣಾತ್ಮಕ ಬೆಳವಣಿಗೆಗಳನ್ನು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಸಮಿತಿ ದಾಖಲಿಸಿದೆ.

ಬಹಳ ಮುಖ್ಯವಾಗಿ ಮಕ್ಕಳ ನಿಲಯಗಳಲ್ಲೂ ತರಬೇತಿ ಹೊಂದಿದ ಸಿಬ್ಬಂದಿಯ ಕೊರತೆ ಕಾಡುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿರುವ ಕಡೆ ಇಂದಿನ ಅಗತ್ಯವಾದ ದೈಹಿಕ ಅಂತರ ಕಾಪಾಡಿಕೊಳ್ಳುವುದು, ಆಗಾಗ್ಗೆ ಕೈತೊಳೆದುಕೊಳ್ಳಲು ನೀರು, ಸೋಪು ಅಥವಾ ಸ್ಯಾನಿಟೈಸರ್ ವ್ಯವಸ್ಥೆಯಲ್ಲಿ ಕೊರತೆ ಕಾಡುತ್ತದೆ. ಇಷ್ಟರ ಮೇಲೆ ನಿಲಯಗಳಿಗೆ ವಿವಿಧ ಕಾರಣಗಳಿಂದ ಬಂದು ಹೋಗುವ ಜನರ ಸಂಖ್ಯೆಯೂ ಹೆಚ್ಚಿದ್ದು – ಆಹಾರ ಮತ್ತು ಸಂಬಂಧಿತ ವಸ್ತುಗಳನ್ನು ತಂದುಕೊಡುವುದು, ವೈದ್ಯಕೀಯ ಸಿಬ್ಬಂದಿಯ ಭೇಟಿ, ನಿಲಯಗಳ ಸಿಬ್ಬಂದಿ ತಮ್ಮ ಮನೆಗಳಿಗೆ ಹೋಗಿ ಬರುವುದು ಇವೇ ಮೊದಲಾದವು ಎಷ್ಟೇ ಎಚ್ಚರಿಕೆ ವಹಿಸಿದರೂ, ಕೊರೊನಾ ಸೋಂಕು ನಿಲಯಗಳ ಮಕ್ಕಳಿಗೆ ಸುಲಭವಾಗಿ ತಗುಲಲು ಕಾರಣವಾಗಬಹುದು.

